ಮಾನ್ಯ ಅಧ್ಯಕ್ಷರೆ, ಮತ್ತೊಂದು ಬಾರಿ 754ನೇ ಪ್ರಶ್ನೆಯನ್ನು ಮುಖ್ಯಮಂತ್ರಿಯ ಸ್ಥಾನದಲ್ಲಿ ಇರತಕ್ಕಂಥ ಮಾನ್ಯ ಪ್ರಕಾಶ್‌ರವರಿಗೆ ಕೇಳುತ್ತೇನೆ. ಅದೂ ಇಲ್ಲವಾ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳ ಸ್ಥಾನದಲ್ಲಿ ಇಲ್ಲ. ಅವರ ಪರವಾಗಿ ತಾತ್ಕಾಲಿಕವಾಗಿ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾತ್ಕಾಲಿಕ ಮುಖ್ಯಮಂತ್ರಿ ಕೆಲಸವನ್ನು ವಹಿಸಿರತಕ್ಕಂಥ ಮಾನ್ಯ ಪ್ರಕಾಶ್‌ರವರನ್ನು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ವಾಟಾಳ್ ನಾಗರಾಜ್ ರವರು ಈ ಮನೆಯಲ್ಲಿ ಬೆಂಕಿ ಹೆಚ್ಚುವಂತಹ ಕೆಲಸವನ್ನು ಮಾಡುತ್ತಾರೆ. ನೋಡಿ ಅಲ್ಲಿ ಅವರ ಪಕ್ಕದಲ್ಲಿ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾರೆ, ಅವರನ್ನು ಬಿಟ್ಟು ಮಾನ್ಯ ಪ್ರಕಾಶ್‌ರವರು ತಾತ್ಕಾಲಿಕ ಮುಖ್ಯಮಂತ್ರಿಗಳು ಎಂದು ಹೇಳಿದರೆ ಅವರ ಗತಿಯೇನಾಗಬೇಕು?

ಒಬ್ಬರು ಮಾನ್ಯ ಸದಸ್ಯರು: ಈಗ ಅವರಿಬ್ಬರ ಮಧ್ಯೆ ಬೆಂಕಿಯನ್ನು ನೀವು ಹಚ್ಚುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಿಜವಾದ ಬೆಂಕಿಯನ್ನು ಹಚ್ಚಿದವನು ನಾನಲ್ಲ. ಮಾನ್ಯ ಖರ್ಗೆಯವರು ಬೆಂಕಿ ಹಚ್ಚಿದ್ದು ಈಗ. ಪಾಪ ಗಂಭೀರವಾಗಿ ಆರ್ಥಿಕ ಚಿಂತನೆಯನ್ನು ಮಾನ್ಯ ಯಡಿಯೂರಪ್ಪನವರು ಮಾಡುತ್ತಿರುವಾಗ ನಾವು ಅವರ ತಲೆ ಕೆಡಿಸುವುದು ಸರಿಯಲ್ಲ. ಅವರು ಈ ರಾಜ್ಯದಲ್ಲಿ ಯಾವ್ಯಾವ ಕಡೆಯಿಂದ ಎಷ್ಟೆಷ್ಟು ಹಣ ಬರಬೇಕೆಂದು ಹೇಳಿ ಚಿಂತನೆ ಮಾಡುತ್ತಾ ಕುಳಿತುಕೊಂಡಿರುವಾಗ, ನಾವು ಅವರ ತಲೆ ಕೆಡಿಸತಕ್ಕಂಥಾದ್ದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ಈಗ ನಾನು ಮತ್ತೊಮ್ಮೆ 754ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿರುವ ಅರ್ಕಾವತಿ ಬಡಾವಣೆ ನಿವೇಶನಗಳ ಬಗ್ಗೆ.

754 ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರ್ಕಾವತಿ ಬಡಾವಣೆಯ ಕಾಮಗಾರಿಯು ಯಾವಾಗ ಆರಂಭವಾಯಿತು;

ಆ) ಅರ್ಕಾವತಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಮಾಡಲು ಸರ್ಕಾರ ತೀರ್ಮಾನಿಸಿದೆ;

ಇ) ಬೆಂಗಳೂರು ನಗರದಲ್ಲಿ ನಿವೇಶನ ಕೋರಿ ಎಷ್ಟು ಜನ ಫಲಾನುಭವಿಗಳು ಇದುವರೆಗೂ ಮನವಿಯನ್ನು ಸಲ್ಲಿಸಿದ್ದಾರೆ;

ಈ) ಅರ್ಕಾವತಿ ಬಡಾವಣೆಯ ಕಾಮಗಾರಿಗೆ ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ.

ಉ) ಈ ಭೂಮಿಯನ್ನು ವಶಪಡಿಸಿಕೊಂಡ ರೈತರಿಗೆ ಇದುವರೆಗೂ ಕೊಟ್ಟಿರುವ ಹಣ ಎಷ್ಟು;

ಊ) ರೈತರಿಗೆ ಇನ್ನೂ ಕೊಡಬೇಕಾಗಿರುವ ಹಣವೆಷ್ಟು;

ಖ) ಬೆಂಗಳೂರು ನಗರದಲ್ಲಿ ನಿವೇಶನ ಕೋರಿ ಅರ್ಜಿದಾರರು ನೀಡಿರುವ ಠೇವಣಿ ಹಣವೆಷ್ಟು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) 15.12.2004

ಆ) ಅಧಿಸೂಚನೆಯಂತೆ ಅರ್ಕಾವತಿ ಬಡಾವಣೆಯಲ್ಲಿ ಒಟ್ಟು 20,000 ನಿವೇಶನಗಳನ್ನು ರಚಿಸಲು ತೀರ್ಮಾನಿಸಲಾಗಿತ್ತು. ಆದರೆ, ಮಾನ್ಯ ನ್ಯಾಯಾಲಯವು ಭೂಸ್ವಾಧೀನ ಪಡಿಸಿರುವ ಜಮೀನಿನ ಮೇಲೆ ದೇಶಗಳನ್ನು ನೀಡಿದ್ದರ ಹಿನ್ನೆಲೆಯಲ್ಲಿ ಜಮೀನಿನ ಲಭ್ಯತೆಗೆ ಅನುಗುಣವಾಗಿ 14,000 ನಿವೇಶನಗಳನ್ನು ರಚಿಸಲಾಗಿರುತ್ತದೆ. ವಿವಿಧ ಅಳತೆಯ 8,813 ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲು ಕ್ರಮ ಕೈಗೊಂಡಿದ್ದು, ಉಳಿದ ನಿವೇಶನಗಳನ್ನು ಮೂಲೆ ನಿವೇಶನಗಳನ್ನಾಗಿ ಮತ್ತು ಇನ್ನೂ ಉಳಿದವುಗಳನ್ನು ಭೂಮಾಲೀಕರಿಗೆ ಹಂಚಿಕೆ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಮುಂದೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

ಇ) ಅರ್ಕಾವತಿ ಬಡಾವಣೆ ನಿವೇಶನ ಹಂಚಿಕೆಗಾಗಿ ಪ್ರಾಧಿಕಾರವು ದಿನಾಂಕ:21/02/2004 ರಂದು ವಿವಿಧ ಅಳತೆಯ ಒಟ್ಟು 20,000 ನಿವೇಶನಗಳನ್ನು ಹಂಚಿಕೆ ಮಾಡಲು ಅಧಿಸೂಚನೆಯನ್ನು ಹೊರಡಿಸಿದ್ದು, ಕ್ರಮವಾಗಿ 20x30 ಅಡಿ ಅಳತೆಯ ನಿವೇಶನಗಳಿಗೆ 51126, 30x40 ಅಡಿ ಅಳತೆಯ ನಿವೇಶನಗಳಿಗೆ 83307, 40x60 ಅಡಿ ಅಳತೆಯ ನಿವೇಶನಗಳಿಗೆ 61637 ಮತ್ತು 50x80 ಅಡಿ ಅಳತೆಯ ನಿವೇಶನಗಳಿಗೆ 41020 ಹೀಗೆ ಒಟ್ಟು 2,37,090 ಅರ್ಜಿಗಳನ್ನು ಪ್ರಾರಂಭಿಕ ಠೇವಣಿಯೊಂದಿಗೆ ಸ್ವೀಕೃತವಾಗಿದೆ.

ಈ) ಅರ್ಕಾವತಿ ಬಡಾವಣೆಯ ಯೋಜನೆಗಾಗಿ 2,750 ಎಕರೆ ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಿ, 1,618 ಎಕರೆ ಜಮೀನಿಗೆ ಐತೀರ್ಪು ರಚಿಸಿ ಇಲ್ಲಿಯವರೆಗೆ 1,224 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತದೆ.

ಉ) ಇಲ್ಲಿಯವರೆಗೆ 3.14 ಕೋಟಿ ರೂಪಾಯಿಗಳನ್ನು ಭೂ ಮಾಲಿಕರುಗಳಿಗೆ ಪರಿಹಾರವನ್ನಾಗಿ ಪಾವತಿಸಲಾಗಿದೆ

ಊ) ಇದುವರೆವಿಗೆ 1224 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಂಡಿದ್ದು, ಇದರ ಬಾಬ್ತು ಒಟ್ಟು ರೂ. 244.80 ಕೋಟಿ ಪಾವತಿಸಬೇಕಾಗಿರುತ್ತದೆ. ಈ ಪೈಕಿ 3.14 ಕೋಟಿ ರೂ.ಗಳನ್ನು ಪಾವತಿಸಲಾಗಿರುತ್ತದೆ. ಉಳಿಕೆ ರೂ. 241.66 ಕೋಟಿಗಳನ್ನು ಪಾವತಿಸಬೇಕಾಗಿರುತ್ತದೆ.

ಋ) ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ನಿವೇಶನ ಕೋರಿ ಅರ್ಜಿದಾರರು ನೀಡಿದ ಪ್ರಾರಂಭಿಕ ಠೇವಣಿ ರೂ. 954.27 ಕೋಟಿಗಳನ್ನು ಮಾರ್ಚ್ 2005ರ ಹಾಗೂ ಆಗಸ್ಟ್ 2005ರಲ್ಲಿ ಸಂಪೂರ್ಣವಾಗಿ ಎಲ್ಲಾ ಅರ್ಜಿದಾರರಿಗೆ ಹಿಂದಿರುಗಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಅಧ್ಯಕ್ಷರೆ, ಈ ಅರ್ಕಾವತಿ ಯೋಜನೆ ಇದೊಂದು ಭೂತ. ಬೆಂಗಳೂರಿನ ನಿವೇಶನ ರಹಿತರಿಗೆ ದೊಡ್ಡ ಭೂತ ಇದು. ಎಷ್ಟು ಜನ ಇದರ ಬಗ್ಗೆ ಚಿಂತನೆ ಮಾಡಿ ನಿವೇಶನ ಸಿಗದೆ ರೋಗಗ್ರಸ್ಥರಾಗಿದ್ದಾರೆ, ಅನಾರೋಗ್ಯ ಪೀಡಿತರಾಗಿದ್ದಾರೆ, ಕೆಲವರು ಅಸುನೀಗಿದ್ದಾರೆ. ನನಗನ್ನಿಸುತ್ತದೆ, ಇದು ಆರಂಭವಾದುದು ಹಿಂದಿನ ಸರ್ಕಾರದಲ್ಲಿ, ಬಹುಶ: ಎಸ್.ಎಂ.ಕೃಷ್ಣ ರವರು ಮುಖ್ಯಮಂತ್ರಿಗಳಾಗಿದ್ದಾಗ ಇದು ಆರಂಭವಾಯಿತು. ಆಗ ಅದು ಆರಂಭವಾದಾಗ ಒಂದು ರೀತಿಯಲ್ಲಿ ಸದುದ್ದೇಶದಿಮದ ಆರಂಭವಾಯಿತು. ಅದನ್ನು ನಾವು ಪ್ರಾಮಾಣಿಕವಾಗಿ ಒಪ್ಪೋಣ. ಆ ಸದುದ್ದೇಶವನ್ನು ದಾರಿ ತಪ್ಪಿಸಿ, ಆ ಅರ್ಕಾವತಿ ಬಡಾವಣೆ ಯಾವ ಉದ್ದೇಶದಿಂದ ಆರಂಭವಾಯಿತು, ಆ ಉದ್ದೇಶ ಸಫಲವಾಗಲಿಲ್ಲ. ಬರುಬರುತ್ತಾ ಒಂದು ರೀತಿ ಅದಕ್ಕೆ ಕ್ಷಯರೋಗ ಆರಂಭವಾಯಿತು. ಇವತ್ತು ಕೊನೆಗೆ ಯಾವುದೋ ಒಂದು ಹಂತಕ್ಕೆ ಬಂದು ನಿಂತಿದೆ. ಇಲ್ಲಿ ಹೇಳಿರುವಂತಹ ಉತ್ತರದಲ್ಲಿ ಒಟ್ಟು ರೈತರಿಂದ 2,750 ಎಕರೆ ಪ್ರದೇಶ ವಶಪಡಿಸಿಕೊಂಡಿದ್ದು ಅದರಲ್ಲಿ ಇವರು ನಿವೇಶನಕ್ಕೆ ಕೊಟ್ಟಿದ್ದು ಕೇವಲ 1,224 ಎಕರೆ. ಮಿಕ್ಕ ಜಮೀನನ್ನು ಯಾವ ಕಾರಣಕ್ಕೆ, ಯಾವಾಗ ಹಿಂದಕ್ಕೆ ಬಿಟ್ಟುಕೊಟ್ಟರಿ. ಯಾರ್ಯಾರಿಗೆ ಬಿಟ್ಟುಕೊಟ್ಟರಿ? ಯಾರ ಒತ್ತಡಕ್ಕೆ ಬಿಟ್ಟುಕೊಟ್ಟರಿ? ಯಾರ ಪ್ರಭಾವದಿಂದ ನೀವು ಒಂದೂವರೆ ಸಾವಿರ ಎಕರೆ ಪ್ರದೇಶವನ್ನು ಹಿಂದಕ್ಕೆ ಬಿಟ್ಟುಕೊಟ್ಟರಿ? ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತೇನೆ, 2,750 ಎಕರೆ ಅರ್ಕಾವತಿ ಯೋಜನೆಗೆ ಏನೇನು ಮಾಡಬೇಕೆಂದು ಅನುಮತಿ ತೆಗೆದುಕೊಂಡು ಎಲ್ಲಾ ಮುಗಿದು, ಈ ಅಭಿವೃದ್ಧಿ ಪ್ರಾಧಿಕಾರ ತನ್ನ ಹೊಣೆಗಾರಿಕೆಯನ್ನು ಮಾಡಿ ಕೊನೆಗೆ ಅಂತಿಮವಾಗಿ 1,224 ಎಕರೆಗೆ ನಿಂತಿತು. ಎಂದರೆ ಮಿಕ್ಕ ಜಮೀನನ್ನು ಹಿಂದಕ್ಕೆ ಕೊಡುವುದಕ್ಕೆ ಯಾರ ಒತ್ತಡ? ಯಾರ ಒತ್ತಡದಿಂದ ಹಿಂದಕ್ಕೆ ಕೊಟ್ಟರಿ? ಯಾವ ಕಾರಣಕ್ಕೆ ಕೊಟ್ಟರಿ? ಎಷ್ಟು ದಿವಸದಲ್ಲಿ ಕೊಟ್ಟಿದ್ದೀರಿ ಎನ್ನುವುದು ಒಂದು ಪ್ರಶ್ನೆ ಎರಡನೆಯದು 1,224 ಎಕರೆಗೆ ಸುಮಾರು ಒಟ್ಟು 244 ಕೋಟಿ 80 ಲಕ್ಷ ರೂಪಾಯಿ ಇದಕ್ಕೆ ಆಗುವಂತಹ ಹಣ. ಆದರೆ ಇವರು ರೈತರಿಗೆ ಕೊಟ್ಟಿರತಕ್ಕಂಥಾದ್ದು, ಕೇವಲ 3 ಕೋಟಿ 14 ಲಕ್ಷ ರೂಪಾಯಿ. ಇದರ ಅಂತರ ನೋಡಿ. 244 ಕೋಟಿ ರೂಪಾಯಿ 1,224 ಎಕರೆಗೆ ಇದ್ದು, ಇವರು ರೈತರಿಗೆ ಕೊಟ್ಟಿರುವುದು 3 ಕೋಟಿ 14 ಲಕ್ಷ ರೂಪಾಯಿ ಮಾತ್ರ. ರೈತರ ಗತಿ ಏನು? ರೈತರ ಪರಿಸ್ಥಿತಿ ಏನು? 224 ಕೋಟಿ ರೂಪಾಯಿಯ ಬಡ್ಡಿ ಏನು? ರೈತರನ್ನು ಇಷ್ಟೊಂದು ಗುಲಾಮರ ರೀತಿಯಲ್ಲಿ, ಇಷ್ಟೊಂದು ಕೆಟ್ಟ ರೀತಿಯಲ್ಲಿ ಸರ್ವಾಧಿಕಾರಿ ಮನೋಭಾವನೆಯಲ್ಲಿ ನೋಡಿರತಕ್ಕಂಥ ಉದ್ದೇಶವಾದರೂ ಏನು? ಇನ್ನು ಠೇವಣಿದಾರರಿಂದ 954 ಕೋಟಿ 27 ಲಕ್ಷ ರೂಪಾಯಿ ಠೇವಣಿ ಇಟ್ಟಿರತಕ್ಕಂಥಾದ್ದು. ಈ ಠೇವಣಿ ಹಣವನ್ನು ಹಿಂದಕ್ಕೆ ತಿರುಗಿಸುತ್ತಾರೆ. ಅದಕ್ಕೆ ಬಡ್ಡಿ ಇಲ್ಲ. ಠೇವಣಿ ಏಕೆ ತೆಗೆದುಕೊಂಡರು? ಠೇವಣಿ ತೆಗೆದುಕೊಂಡ ಮೇಲೆ ಪ್ರತಿಯೊಬ್ಬರಿಗೂ ಕೂಡ ನೀವು ನಿವೇಶನವನ್ನು ಕೊಡಬೇಕು. ಅದು ನಿಮ್ಮ ಕರ್ತವ್ಯ. ನೀವು ಅರ್ಜಿಯನ್ನು ಕರೆದು ಠೇವಣಿ ಕೊಡಿ ಎಂದು ಕೇಳಿದ ಮೇಲೆ, ಹಣವನ್ನು ಅವರು ಕಟ್ಟಿದ ಮೇಲೆ ನಿವೇಶನವನ್ನು ಕೊಡತಕ್ಕಂಥ ಜವಾಬ್ದಾರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ್ದು. ಆದರೆ ನೀವು ನಿವೇಶನವನ್ನು ಕೊಡದೆ ಹಣವನ್ನು ಹಿಂದಿರುಗಿಸತಕ್ಕಂಥಾದ್ದು ಅತ್ಯಂತ ಅಪರಾಧ

ಆದ್ದರಿಂದ ಸರ್ಕಾರ ಇಷ್ಟು ಜನರಿಗೆ ನಿವೇಶನವನ್ನು ಕೊಡತಕ್ಕಂಥ ಉದ್ದೇಶ ಇರಬೇಕು ಎನ್ನುವುದು ಒಂದು ಇನ್ನು ಎರಡನೇಯದಾಗಿ 2,750 ಎಕರೆ ಜಮೀನು ತೆಗೆದುಕೊಂಡು ಕೇವಲ 1,224 ಎಕರೆಗೆ ನಿಂತಿರುವಂತಹ ಉದ್ದೇಶವೇನು?

ಶ್ರೀ ಎಂ.ಪಿ.ಪ್ರಕಾಶ್: (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರು ಹೇಳಿದ ಹಾಗೆ 1,618 ಎಕರೆಗೆ ಐತೀರ್ಪು ರಚಿಸಬೇಕು ಎಂದು ಆಗ ನಿರ್ಧಾರವಾಗಿದೆ. ಮೊದಲು ಅಂದಾಜಿನ ಪ್ರಕಾರ 2,750 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಯಿತು. ಸದುದ್ದೇಶದಿಂದ ರಚಿತವಾಗಿರುವ ಈ ಕಾಮಗಾರಿ ದಿನಾಂಕ: 15.12.2004 ರಿಂದ ಪ್ರಾರಂಭವಾಯಿತು. ಈ ಕಾಮಗಾರಿ ಪ್ರಾರಂಭ ಮಾಡಿದಮೇಲೆ 2,750 ಎಕರೆಗೆ ಅಧಿಸೂಚನೆ ಹೊರಡಿಸಿದ ನಂತರ 1,618 ಎಕರೆಗೆ ಮಾತ್ರ ಐತೀರ್ಪುಗೆ ಒಳಪಡಿಸಿಕೊಂಡು ಮಾಡಬೇಕೆಂದಾಗ ಉಳಿದಿರತಕ್ಕಂಥಾದ್ದನ್ನು ಹಾಗೆ ಬಿಟ್ಟಿದ್ದಾರೆ. ಈ ಪ್ರಶ್ನೆಯಲ್ಲಿ ಯಾವ್ಯಾವ ಜಮೀನನ್ನು ಬಿಟ್ಟರು? ಯಾವ್ಯಾವ ಕಾರಣಕ್ಕೆ ಬಿಟ್ಟರು ಎನ್ನುವುದಕ್ಕೆ ಒಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿ. ಅಥವಾ ಅಧಿಕಾರಿಗಳ ಮೂಲಕ ಅವರಿಗೆ ಉತ್ತರವನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನೋಡಿ, ಅವರು ಪ್ರಶ್ನೆ ಕೇಳಿರುವಂತಾದ್ದು ಏನೆಂದು ಕೇಳಿ ಇಲ್ಲಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಇಲ್ಲ, ಇಲ್ಲ.

ಶ್ರೀ ಎಂ.ಪಿ.ಪ್ರಕಾಶ್: ತಾವು ದಯವಿಟ್ಟು ಪ್ರಶ್ನೆಯನ್ನು ನೋಡಿ ಅರ್ಕಾವತಿ ಬಡಾವಣೆಯ ಕಾಮಗಾರಿಗೆ ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ? ಈಗ ಡೀನೋಟಿಫೈ ಆಗಿರುವಂತಹ ವಿವರ ಇದರಲ್ಲಿ ಇಲ್ಲ. ಆ ಪ್ರಶ್ನೆ ಅವರು ಕೇಳಿಲ್ಲ. ಅದರಲ್ಲಿ ಪ್ರಶ್ನೆ ಬಂದಿರುವಂಥಾದ್ದು, ಎಷ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಎಂದರೆ 1,618 ಎಕರೆಯನ್ನು ಐತೀರ್ಪಿಗೆ ಒಳಪಡಿಸಿ 1,224 ಎಕರೆಯನ್ನು ಭೂಸ್ವಾಧೀನ ಮಾಡಿಕೊಂಡಿದ್ದಾರೆ. ಉಳಿದಿರುವಂತಹ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಇದರ ಜೊತೆಗೆ ದಿನಾಂಕ:14.4.2005 ರಂದು ನಮ್ಮ ಉಚ್ಚ ನ್ಯಾಯಾಲಯ ಈ ಭೂಸ್ವಾಧೀನ ಪ್ರಕ್ರಿಯೆಯನ್ನು ಹೊಡೆದು ಹಾಕಿದೆ. ನೀವು ಭೂಸ್ವಾಧೀನ ಪ್ರಕ್ರಿಯೆ ಮಾಡಿಕೊಂಡಿರುವುದೇ ಕಾನೂನುಬಾಹಿರ ಎಂದೇಳಿ ಅದನ್ನು ತಳ್ಳಿ ಹಾಕಿದೆ. ಅದರ ಮೇಲೆ ಸರ್ಕಾರ ಮೇಲ್ಮನವಿಯನ್ನು ದ್ವಿಸದಸ್ಯ ಪೀಠಕ್ಕೆ ಸಲ್ಲಿಸಿತು. ಇದನ್ನು "ದ್ವಿಸದಸ್ಯ ಪೀಠ" ದವರು ದಿನಾಂಕ: 25.11.2005 ರಂದು ಸರ್ಕಾರದವರು ಮಾಡಿರುವಂಥಾದ್ದು ಸರಿಯಾಗಿದೆ. ಇದರ ಜೊತೆಗೆ ಕೆಲವು ಶರತ್ತುಗಳನ್ನು ಒಳಪಡಿಸಿದ್ದರು. ಆ ಶರತ್ತುಗಳ ಮಾರ್ಗಸೂಚಿಗೆ ಅನುಗುಣವಾಗಿ ಒಂದು ತಿಂಗಳ ಅವಧಿಯನ್ನು ಭೂಮಿ ಕಳೆದುಕೊಂಡಿರುವ ಮಾಲೀಕರಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟರು? ಅವರು ಏನಾದರೂ ಅರ್ಜಿಗಳನ್ನು ಕೊಡುವುದಾದರೆ ಭೂ ಸ್ವಾಧೀನ ಪ್ರಕ್ರಿಯೆಯಿಂದ ಅದನ್ನು ಕೈ ಬಿಡಬೇಕೆಂಬುದು ಇದ್ದರೆ, ಅದಕ್ಕೆ ನೀವು ಅರ್ಜಿಯನ್ನು ಕೊಡಿ, ಎಂದು ಮಾಡಿದರು. ಅದರ ಪ್ರಕಾರ

ನೂರಾರು ಜನರು ಅರ್ಜಿಯನ್ನು ಕೊಟ್ಟರು. ಅದರಲ್ಲಿ 840 ಎಕರೆಯಷ್ಟು ಪೈಕೋರ್ಟ್‌ನವರು ಕೊಟ್ಟಿರುವಂತಹ ಮಾರ್ಗಸೂಚಿಗೆ ಅನುಗುಣವಾಗಿ ಇಲ್ಲ. ಆದುದರಿಂದ ಭೂಸ್ವಾಧೀನ ಪ್ರಕ್ರಿಯೆ ಸರಿಯಾದದ್ದು, ಸಕ್ರಮವಾದದ್ದು, ಕಾನೂನು ಪ್ರಕಾರ ಆಗಿರುವಂಥಾದ್ದು, ಎಂದು ಮಾಡಿದ್ದಾರೆ. ಇನ್ನು 144 ಎಕರೆ 32 ಗುಂಟೆ ಜಮೀನು ಮಾತ್ರ ಅವರಿಗೆ ಅರ್ಹವಾಗಿ ಆಗುತ್ತದೆ. ಏಕೆಂದರೆ ಶರತ್ತುಗಳು ಮತ್ತು ನಿಬಂಧನೆಗೆ ಒಳಪಟ್ಟಿರುವಂತಹ ತೀರ್ಮಾನಕ್ಕೆ ಎಂದು ಹೇಳಿ, ಅದನ್ನು ಬಿಟ್ಟು ಕೊಡುವಂಥಾದ್ದನ್ನು ಮಾಡಿದ್ದಾರೆ. ಈಗ ಇಲ್ಲಿಯವರೆಗೂ ಯಾವ ಭೂಮಿಯನ್ನು ಹಿಂದಕ್ಕೆ ಕೊಟ್ಟಿಲ್ಲ. ಏಕೆಂದರೆ ಐತೀರ್ಪಿಗೆ ಒಳಪಡಿಸಿರುವಂಥಾದ್ದು, 1,618 ಎಕರೆ ಅದರಲ್ಲಿ 1,224 ಎಕರೆ ಭೂಮಿಯನ್ನು ನಾವು ಈಗಾಗಲೇ ಭೂಸ್ವಾಧೀನ ಪಡಿಸಿಕೊಂಡಿರುತ್ತೇವೆ. ಉಳಿದ ಭೂಮಿಯ ಭೂಸ್ವಾಧೀನ ಪ್ರಕ್ರಿಯೆ ಎನ್ನುವಂಥಾದ್ದು, ಈ ಕ್ರಮ ಈಗಲೂ ಹಾಗೆ ಮುಂದುವರೆದಿದೆ. ಈಗ ತಾವು ಪರಿಹಾರ ವಿಚಾರವಾಗಿ ಏನು ಪ್ರಶ್ನೆಯನ್ನು ಮಾಡಿದ್ದೀರಿ. ಅದು ನಿಜವಾಗಿಯೂ ಕೂಡ ಅಕ್ಷಮ್ಯ. ಆದರೆ ಬಡ್ಡಿಯನ್ನು ಕೊಡಬೇಕೆಂಬ ವಿಚಾರವನ್ನು ನಾನು ವೈಯಕ್ತಿಕವಾಗಿ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಠೇವಣಿ ಇಡತಕ್ಕಂಥ ಮತ್ತು ಅರ್ಜಿಯನ್ನು ಕೊಟ್ಟಿರುವಂತಹ ಸಂದರ್ಭದಲ್ಲಿ, ಬಿ.ಡಿ.ಎ. ನವರು ಸ್ಪಷ್ಟವಾಗಿ ಹೇಳಿದ್ದಾರೆ. ತಾವು ಅರ್ಜಿಯನ್ನು ಕೊಡುವಂತಹ ಸಂದರ್ಭದಲ್ಲಿ, ಠೇವಣಿ ಇಡುವಂತಹ ಹಣಕ್ಕೆ ನಾವು ಯಾವುದೇ ರೀತಿಯ ಬಡ್ಡಿಯನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ. ಈ ರೀತಿ ಇದ್ದಾಗಲೂ ಅವರು ಕೊಟ್ಟಿದ್ದಾರೆ. ಆದರೆ ಈಗಾಗಲೇ ನಾವು ತಮಗೆ ತಿಳಿಸಿರುವಂತೆ 954.27ಕೋಟಿ ರೂಪಾಯಿಗಳನ್ನು ಹಿಂತಿರುಗಿಸಲಾಗಿದೆ. ಇಲ್ಲಿ ಬಡ್ಡಿ ಕೊಡಬೇಕಾಗಿತ್ತು. ಎನ್ನುವಂಥಾದ್ದು ಏನಾಗಿದೆ, ಅದು ಸರಿಯಾದುದು. ಆದರೆ ಕಾನೂನಿನ ಪ್ರಕಾರ ಬಡ್ಡಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಅವತ್ತೆ ಅರ್ಜಿದಾರರಿಗೆ ತಿಳಿಸಿದ್ದೇವೆ. ಅದರ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳು ಏನೇ ಇದ್ದರೂ ಕೂಡ, ಈ ಬಡ್ಡಿ ಕೊಡುವಂಥಾದ್ದರ ಮೇಲೆ ಸ್ಪಷ್ಟವಾಗಿ ಇರುವಂಥಾದ್ದು. ಈ 2,750 ಎಕರೆಯಲ್ಲಿ 487 ಎಕರೆ ಸರ್ಕಾರಿ ಭೂಮಿ ಕೂಡ ಇದೆ. ಆದುದರಿಂದ ಅದರ ಮೇಲೆ ಡೀನೋಟಿಫೈ ಮಾಡಿ ಬೇರೆ ಕಡೆ ಕೊಟ್ಟಿದ್ದಾರೆಂಬ ಪ್ರಶ್ನೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಈ 400 ಎಕರೆ ಬಿಡಿ, ಮಿಕ್ಕದ್ದು, ಹೇಳಿ;

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವ್ಯಾವ ರಾಜಕಾರಣಿಗಳು, ಯಾರ್ಯಾರು ಅಧಿಕಾರಿಗಳು.

ಶ್ರೀ ಎಂ.ಪಿ.ಪ್ರಕಾಶ್: ಅದೆಲ್ಲವೂ ಕೂಡ ಹಿಂದಿನ ಸರ್ಕಾರದ ಕಾಲದಲ್ಲಿ ಆಗಿರತಕ್ಕದ್ದು

ಶ್ರೀ ಆರ್. ರೋಷನ್ ಬೇಗ್: ಹಿಂದಿನ ಸರ್ಕಾರವೆಂದರೆ, ತಾವು ಈಗ ಸರ್ಕಾರದಲ್ಲಿ ಇದ್ದೀರಿ. ತಾವು ಈಗ ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, 1,618 ಎಕರೆ ಜಮೀನಿಗೆ ಐತೀರ್ಪನ್ನು ಮಾಡಿಕೊಂಡಿರುವಂಥಾದ್ದು. ಅದರಲ್ಲಿ 1,224ಎಕರೆಯನ್ನು ಈಗಾಗಲೇ ಭೂಸ್ವಾಧೀನ ಮಾಡಿಕೊಂಡಿದ್ದೇವೆ. ಉಳಿದಿರುವಂತಹ ಪ್ರಕ್ರಿಯೆ ಚಾಲ್ತಿಯಲ್ಲಿ ಇದೆ. ಇಲ್ಲಿ ಯಾವ ಭೂಮಿಯನ್ನು

ಬಿಟ್ಟು ಕೊಡುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಇದರಲ್ಲಿ ಸಂಬಂಧಪಟ್ಟಿರುವಂಥಾದ್ದರಲ್ಲಿ 487 ಎಕರೆ ಈಗಲೂ ಸರ್ಕಾರಿ ಭೂಮಿ ಇರುವಂಥಾದ್ದು ಇದೆ. ಇನ್ನು ಉಳಿದಿರುವಂಥಾದ್ದರ ಬಗ್ಗೆ ತಾವು ಹೇಳಿರುವಂಥಾದ್ದು, ಹಣವನ್ನು ವಾಪಸ್ಸು ಕೊಡುವಂಥಾದ್ದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಇದು ಡಿನೋಟಿಫಿಕೇಶನ್ ಆಗಿಲ್ಲವಾ?

ಶ್ರೀ ಎಂ.ಪಿ.ಪ್ರಕಾಶ್:ಅದರ ಮಾಹಿತಿ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಸಪ್ಲಿಮೆಂಟರಿ ಪ್ರಶ್ನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಪ್ರಿಲಿಮಿನರಿ ನೋಟಿಫಿಕೇಶನ್ ಅನ್ನು ಆಗಲೇ ಬಿಟ್ಟಿದ್ದಾರೆ. ಇದು ತಂತ್ರಗಾರಿಕೆ ಇದು. ನಾವು 4(1) ಮಾಡಿ..

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ಈ ವಿಷಯದ ಬಗ್ಗೆ ಬಹಳ ಸ್ಪಷ್ಟವಾಗಿ ಮಾತನಾಡಿಬಿಡೋಣ. ಬೆಂಗಳೂರು ಸುತ್ತ ಮುತ್ತ ಇರತಕ್ಕಂಥ ಭೂಮಿ ಬಂಗಾರಕ್ಕಿಂತ ಹೆಚ್ಚು ಬೆಲೆ ಬಾಳುವಂಥಾದ್ದು. ನಾವೆಲ್ಲರೂ ಸಾರ್ವಜನಿಕವಾಗಿ ಕೇಳುತ್ತಾ ಇರುವ ಹಾಗೆ ಇದು ದಂಧೆ. ನೋಟಿಫಿಕೇಶನ್, ಡೀನೋಟಿಫಿಕೇಶನ್, ಮಾಡುವುದು ಒಂದು ದಂಧೆ. ಕೆಲವು ಪ್ರಭಾವಿ ವ್ಯಕ್ತಿಗಳು, ಅವರು ಅಧಿಕಾರದಲ್ಲಿ ಇರಬಹುದು, ರಾಜಕಾರಣದಲ್ಲಿ ಇರಬಹುದು, ರಾಜಕೀಯ ಕಾರ್ಯಕರ್ತರಾಗಿರಬಹುದು, ಅಥವಾ ಯಾರಿಗೂ ಕಾಣದೇ ಇರತಕ್ಕಂಥ ಅದೃಶ್ಯವಾಗಿರುವಂಥ ಶಕ್ತಿಗಳು ಆಗಿರಬಹುದು. ಒಂದು ಯೋಜನೆಯನ್ನು ರೂಪಿಸಬೆಕಾಗಿದ್ದರೆ, ಈ ಯೋಜನೆಯನ್ನು ಮಾಡುತ್ತಿದ್ದೇವೆ. ಇದಕ್ಕೆ ಇಷ್ಟು ಎಕರೆ ಜಮೀನನ್ನು ಸ್ವಾಧೀನ ಮಾಡುತ್ತೇವೆ, ಇಷ್ಟು ಸೈಟ್ ಆಗುತ್ತದೆ. ಇಷ್ಟು ರೋಡಿಗೆ ಹೋಗುತ್ತದೆ, ಇಷ್ಟು ಜನರಿಗೆ ಆಗುತ್ತದೆಂದು ಯೋಜನೆಯನ್ನು ಮಾಡಿರುತ್ತಾರೆ. ಅಷ್ಟನ್ನು ಯೋಜನೆ ಮಾಡಿ ಇಷ್ಟು ಅಕ್ವಾಯರ್ ಮಾಡಬೇಕೆಂದು ಉದ್ದೇಶವನ್ನು ಇಟ್ಟಿಕೊಂಡು ನೋಟೀಪಿಕೇಶನ್ ಅನ್ನು ಹೊರಡಿಸಿದ ಮೇಲೆ, ಅದನ್ನು ಯಾವುದೇ ಹಂತದಲ್ಲಿ ಕೈಬಿಟ್ಟಿದ್ದರೆ, ಪ್ರೈಮಾಫೇಸ್ ದುರುದ್ದೇಶ ಎದ್ದು ಕಾಣುತ್ತದೆ. ಲಾಭದ ಅಂಶ ಕಾಣುತ್ತದೆ, ಅಧಿಕಾರದ ದುರುಪಯೋಗದ ಅಂಶ ವ್ಯಕ್ತವಾಗುತ್ತದೆ. ಭ್ರಷ್ಟಾಚಾರ ನಡೆದಿದೆಯೆಂಬ ಭಾವನೆ ಮೇಲ್ನೋಟಕ್ಕೆ ಬರುತ್ತದೆ. ಆದುದರಿಂದ ನಾನು ಏನು ಹೇಳುವುದೇನೆಂದರೆ ಬೇಕಾದರೆ withhold ಮಾಡಿ ನೀವು. Come back with all the information. ಇದನ್ನು ಇನ್ನೊಂದು ದಿವಸ ಚರ್ಚೆ ಮಾಡೋಣ; ಅಥವಾ ಸ್ಪೀಕರ್‌ರವರು ಒಂದು "ಹೌಸ್ ಕಮಿಟಿ"ಯನ್ನು ಕಾನ್‌ಸ್ಟಿಟ್ಯೂಟ್ ಮಾಡಲಿ. ತಾವು ಎಲ್ಲಾ ಫೈಲ್‌ಗಳನ್ನು ಮುಂದೆ ಇಡಿ. ಯಾರು ರೆಕಮೆಂಡ್ ಮಾಡಿದರು? ಯಾರು ಡೀನೋಟಫೈ ಮಾಡಿಸಿಕೊಂಡರು? ಯಾರ ಜಮೀನು ಇತ್ತು? ಯಾರು ಬೇನಾಮಿ? ಯಾರ್ಯಾರ ಹೆಸರಿನಲ್ಲಿ ಯಾರ್ಯಾರು ನಾಟಕ ಮಾಡುತ್ತಿದ್ದಾರೆಂಬ, ಎಲ್ಲಾ ಅಂಶಗಳು ಹೊರಗಡೆ ಬರಲಿ. ಪ್ರತಿ ಸಲ ಇಂಥಾದ್ದು ಬಂದಾಗ ತಿಂದವರು ತಪ್ಪಿಸಿಕೊಂಡು ಹೊಗುತ್ತಾರೆ; ನಿರಪರಾಧಿಯಾದವರು ತಲೆ ತಗ್ಗಿಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಮಾನ್ಯ ಆರ್.ರೋಷನ್‌ಬೇಗ್‌ರವರಂಥ ಹಿರಿಯ ಸದಸ್ಯರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದು ಮೇಲ್ನೋಟಕ್ಕೆ ಆ ರೀತಿಯಲ್ಲಿ ಆಗಿದೆಯೆನ್ನವಂಥಾದ್ದು ಕಾರಣ ಇರಬಹುದು. ಈ ಯೋಜನೆಯನ್ನು ರೂಪಿಸುವಾಗ, ಒಮ್ಮೊಮ್ಮೆ ಯೋಜನೆಗಳನ್ನು ಸರಿಯಾದಂಥ ರೀತಿಯಲ್ಲಿ ವೈಜ್ಞಾನಿಕವಾದ ರೀತಿಯಲ್ಲಿ, ರೂಪಿಸದೇ ಇರುವಂಥ ಕಾರಣಗಳು ಇರುತ್ತವೆ. ಒಂದೊಂದು ಸಂದರ್ಭದಲ್ಲಿ ದುರುದ್ದೇಶದ ಕಾರಣಕ್ಕೂ ಮಾಡಿರುತ್ತಾರೆ: ಹೆಚ್ಚುವರಿಯಾದಂಥ ನೋಟಿಫಿಕೇಶನ್‌ಅನ್ನು ಮಾಡುವುದು, ಆಸಕ್ತರಾದ ಜನರು ಅವರನ್ನು ಕಂಡ ತಕ್ಷಣವೇ ಅನ್ಯ ಕಾರಣಕ್ಕಾಗಿ ಮತ್ತೆ ಅದನ್ನು ಅನೂರ್ಜಿತಗೊಳಿಸುವಂಥಾದ್ದು, ಇವೆಲ್ಲವೂ ಕೂಡ ಇವೆ. ಇವತ್ತಿನ ವ್ಯವಸ್ಥೆಯಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಯಾವುದೋ ಅನ್ಯ ಕಾರಣಗಳಿಗಾಗಿ ಡೀನೋಟಿಫೈ ಮಾಡಿದ್ದಾರೆಂದು ಭಾವಿಸಿಕೊಳ್ಳುವುದರಲ್ಲಿ, ನಿಮಗೆ ಸಂಪೂರ್ಣ ಸ್ವಾಂತಂತ್ರ್ಯ ಇದೆ. ಈ ಬಗ್ಗೆ ಬಹಳಷ್ಟು ಜನರು ಆ ರೀತಿಯಲ್ಲಿ ಯೋಚನೆಯನ್ನು ಮಾಡುತ್ತಾರೆ.

ಅಧ್ಯಕ್ಷರು: ಮಾನ್ಯ ಮಂತ್ರಿಯವರೇ, ಇಲ್ಲಿ ನನ್ನದು ಒಂದು ಪ್ರಶ್ನೆ ಇದೆ. ಈ ವ್ಯವಸ್ಥೆ, ವ್ಯವಸ್ಥೆ ಎಂದೆಲ್ಲಾ ಹೇಳಿಕೊಂಡು, ಅದನ್ನು ಸುಧಾರಣೆ ಮಾಡುವಂತಹ ಒಂದು ಪ್ರಯತ್ನವನ್ನು ಮಾಡಬೇಕೋ ಬೇಡವೋ ಎಂಬುದನ್ನು ತಾವು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ತಾವು ಹೇಳಿದಂತೆ ಎಲ್ಲೋ ಒಂದು ಕಡೆಗೆ ಈ ವ್ಯವಸ್ಥೆಯ ನೆಪದ ಮೂಲಕ, ಅದರ ಕೊಡೆಯ ಅಡಿಯಲ್ಲಿ ನಾವು ಇರುವಂತಹ ನಡವಳಿಕೆಯನ್ನು ತರಬಾರದು. ಆದರೂ ಕೂಡ ವ್ಯವಸ್ಥೆಯನ್ನು ಬದಲಿಸುವಂಥಾದ್ದಕ್ಕೆ ನಾವು ಯಾರೂ ಕೂಡ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿಲ್ಲ. ಇತ್ತೀಚೆಗೆ ಶ್ರೀ ಎಲ್.ಸಿ.ಜೈನ್‌ರವರು "ಹಿಂದೂ" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದರು. ``Sky without stars''--- ಎಂದು, ಬಾನಂಗಳದಲ್ಲಿ ನಕ್ಷತ್ರಗಳೇ ಇಲ್ಲ, ನಮ್ಮ ಮುಂದೆ ಇಂಥಾದ್ದೇ ಒಬ್ಬ Role model ಎಂದು, ನಾವು ಆತನನ್ನು ಆದರ್ಶವನ್ನಾಗಿ ಇಟ್ಟುಕೊಂಡು ನಾವೆಲ್ಲರೂ ರಾಜಕಾರಣ ಮಾಡಬೇಕೆಂದು ಒಬ್ಬರೂ ಕೂಡ ಉಳಿಯದೇ ಇರುವ ಕಾರಣ ಇರುವುದರಿಂದ, ನಮ್ಮ ಎಲ್ಲರ ಧ್ವನಿಗಳೂ ಕೂಡ ಒಂಟಿ ಧ್ವನಿಗಳು ಆಗಿವೆ. ಈ ಒಂಟಿ ಧ್ವನಿಗಳು ಇನ್ನು ಸಾಮೂಹಿಕ ಧ್ವನಿಗಳಾಗುವಂಥ ಕಾಲವೂ ಬರಬಹುದು. ಆ ಸಂದರ್ಭ ಬರಲಿ ಎಂದು ನಾವೆಲ್ಲರೂ ಪ್ರಾರ್ಥನೆ ಮಾಡುತ್ತಿದ್ದೇವೆ, ನಾನು ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಎಂ.ಪಿ.ಪ್ರಕಾಶ್‌ರವರೆ, ನಾನು ತಮ್ಮ ಭಾಷಣಗಳನ್ನು ಕೇಳಿದ್ದೇನೆ ತಾವು ಈಗ sermon ಯನ್ನು ಏನು ಹೇಳಿದ್ದೀರಿ. ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರು ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾಗ, ಡೀನೋಟಿಫೈ ಯಾರ್ಯಾರದ್ದು ಆಗಿದೆ, who are all the influential persons, ಯಾರ್ಯಾರು ಅಧಿಕಾರಿಗಳು, ಯಾರ್ಯಾರು ಮಾಜಿ ಮಂತ್ರಿಗಳು, ಯಾರ್ಯಾರು ಈ ಸದನದ ಸದಸ್ಯರುಗಳು, ಯಾರ್ಯಾರು

ಇಂಡಸ್ಟ್ರೀಯಲಿಸ್ಟ್‌ಗಳು, ಈ ಎಲ್ಲಾ ಪಟ್ಟಿಯನ್ನು ಅಥವಾ ಫೈಲ್ ಅನ್ನು ಸದನದಲ್ಲಿ for the benefit of the Members ಆ ಫೈಲ್ ಅನ್ನು ಟೇಬಲ್ ಮೇಲೆ ಇಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು "ಹೌಸ್ ಕಮಿಟಿ" ಯನ್ನು ಮಾಡಬಹುದು.

ಅಧ್ಯಕ್ಷರು: ಆಯಿತು, ಈಗ ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಶ್ನೆ ಇರುವಂಥಾದ್ದು. ನೀವು ಎಲ್ಲರೂ ಮಾತನಾಡುತ್ತಿದ್ದೀರಿ, ಮಾನ್ಯ ವಾಟಾಳ್ ನಾಗರಾಜ್‌ರವರೆ ಕುಳಿತುಕೊಂಡು ಬಿಟ್ಟಿದ್ದಾರೆ. ನೀವು ಎಲ್ಲರೂ ಹೀಗೆ ಸುಮ್ಮನೆ ಎದ್ದು ನಿಂತುಕೊಂಡು ಒದ್ದಾಡುತ್ತಿದ್ದೀರಿ. ಅವರೇ ಕುಳಿತು ಬಿಟ್ಟಿದ್ದಾರೆ. ಮಾನ್ಯ ಮಂತ್ರಿಗಳೇ, ತಾವು ಉತ್ತರವನ್ನು ಹೇಳಿ ಮುಗಿಸಿ ಬಿಡಿ, ಈಗ 12.35ಗಂಟೆಯಾಯಿತು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ನಮ್ಮಲ್ಲಿ ನಿಯಮಾವಳಿಗಳ ಅನುಗುಣವಾಗಿ ನಮ್ಮ ಸಭೆಯ ಕಾರ್ಯಕಲಾಪಗಳು ನಡೆಯಬೇಕು. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಮಹತ್ವವಾದಂಥ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾರೆ. ಇದರಲ್ಲಿ ಅನೇಕ ಉಪ ಪ್ರಶ್ನೆಗಳು, ಶಂಕೆಗಳು, ಅನುಮಾನಗಳು, ಎಲ್ಲ ಬಂದಿದೆ. ಆ ಕಾರಣಕ್ಕಾಗಿ ತಮಗೆ ಗೊತ್ತಿದೆ, ಆ ನಿಯಮಾವಳಿಯ ಪ್ರಕಾರ ಈ ವಿಷಯವನ್ನು ಅರ್ಧ ಗಂಟೆಯೋ, ಒಂದು ಗಂಟೆಯೋ, ಚರ್ಚೆಗೆ ಅಥವಾ ಫಲಪ್ರದವಾಗಿ ಈ ಕಾಗದ ಪತ್ರಗಳನ್ನು ಸ್ವೀಕರ್‌ರವರ ಚೇಂಬರ್‌ನಲ್ಲಿ ಇಡಬೇಕೆಂಬುದರ ಬಗ್ಗೆ ನಿಯಮಾವಳಿಗಳ ಪ್ರಕಾರ ತಾವು ನೋಟೀಸ್ ಕೊಡಿ. ಈ ಬಗ್ಗೆ ಸರ್ಕಾರ ಮುಚ್ಚಿ ಇಡಬೇಕಾಂಥಾದ್ದು ಏನೂ ಇಲ್ಲ; ಎಲ್ಲವನ್ನೂ ಬಹಿರಂಗಗೊಳಿಸಲು ನಾವು ತಯಾರು ಇದ್ದೇವೆ.

ಅಧ್ಯಕ್ಷರು: ಈಗ ಮಾನ್ಯ ಮಂತ್ರಿಗಳು, ಮುಚ್ಚುಮರೆ ಮಾಡುವಂತಹ ಅಗತ್ಯ ಇಲ್ಲವೆಂದು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ನನ್ನ ಚೇಂಬರ್‌ನಲ್ಲಿ ಇಡುತ್ತಾರೆ, ಅಥವಾ ಅರ್ಧಗಂಟೆ ಚರ್ಚೆಗೆ ಒಪ್ಪಿದ್ದಾರೆ, ಯಾವುದೆಂದು ಹೇಳಿ ಬಿಡಿ, ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈಗ ಕೊನೆಯದಾಗಿ ಒಂದು ಉಪ ಪ್ರಶ್ನೆ. ಈ ಹಂಚಿಕೆಯಲ್ಲಿ ಯಾರ್ಯಾರ ಕೈವಾಡ ಇದೆ, ಇದನ್ನು ಡೀನೋಟಿಫಿಕೇಶನ್ ಆಗಿರುವಂಥಾದ್ದರ ಬಗ್ಗೆ, ತಾವು ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಟ್ಟಿರುವಂಥಾದ್ದು ಬಹಳ ಉಪಯುಕ್ತವಾಗುತ್ತದೆ. ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಂಥಾದ್ದು ತಮಗೆ ಸೇರಿರುವಂಥಾದ್ದು. ನಾನು ಮತ್ತೊಂದು ವಿಚಾರವನ್ನು ಕೇಳುವಂತಾದ್ದು ಏನೆಂದರೆ ಬೆಂಗಳೂರು ನಗರದಲ್ಲಿ ನಿವೇಶನದಾರರು ಯಾರು? ಇವರು ಕರ್ನಾಟಕದವರೇ, ಕನ್ನಡಿಗರೇ ಹೊರ ರಾಜ್ಯದವರೇ? ಇದರ ಬಗ್ಗೆ ತೀರ್ಮಾನವಾಗಬೇಕು. ಏಕೆಂದರೆ ಬೆಂಗಳೂರು ನಗರದಲ್ಲಿ 80ಲಕ್ಷ ಜನರು ಇದ್ದಾರೆ. ಇದು ಬಹಳ ಪ್ರಾಮುಖ್ಯವಾದದ್ದು.

ಅಧ್ಯಕ್ಷರು: ಈಗ ಅರ್ಕಾವತಿ ಬಡಾವಣೆಯ ಬಗ್ಗೆ ಪ್ರಶ್ನೆಯನ್ನು ಕೇಳಿಬಿಟ್ಟು, ಬೇರೆ ಕಡೆಗೆ ಹೋದರೆ, ಈಗ ಸುತ್ತಾಡಿಕೊಂಡು ಬರುತ್ತೇನೆಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಎಲ್ಲೂ ಹೋಗುವುದಿಲ್ಲ, ಇಲ್ಲೇ ಇದ್ದೇನೆ; ಈ ಸದನದಲ್ಲೇ ಇದ್ದೇನೆ.

ಅಧ್ಯಕ್ಷರು: ಆಯಿತು, ಈಗ ಈ ವಿಷಯವನ್ನು ಮುಕ್ತಾಯ ಮಾಡೋಣ. ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ. ಇದು ಬಹಳ ಮುಖ್ಯವಾದದ್ದು, ಏಕೆಂದರೆ ಅನೇಕ ಯೋಜನೆಗಳಲ್ಲಿ ಡೀನೋಟಿಫಿಕೇಶನ್, ಎನ್ನುವಂಥಾದ್ದು, ಇದು ಒಂದು ದಂಧೆಯಾಗಿ ಬಿಟ್ಟಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದು ಒಂದು ದಂಧೆ, ಹಗಲು ದರೋಡೆ ಆಗಿ ಬಿಟ್ಟಿದೆ.

ಅಧ್ಯಕ್ಷರು: ಇದು ಒಂದು ದಂಧೆಯಾಗಿದೆ, ಆ ದಂಧೆಗೆ ಜನರು ಯಾರನ್ನೂ ಬಯ್ಯುವುದಿಲ್ಲ, ರಾಜಕಾರಣಿಗಳು ಬಿಟ್ಟು; ಅಧಿಕಾರಿಗಳನ್ನೂ ಬಯ್ಯುವುದಿಲ್ಲ, ಇನ್ಯಾರನ್ನೂ ಜನ ಬಯ್ಯುವುದಿಲ್ಲ. ಆದುದರಿಂದ ಈ ವಿಷಯ ಚರ್ಚೆಯಾಗಲಿ, ಅದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಇದನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಇನ್ನು ಶ್ರೀ ಬಸವರಾಜ ರಾಯರೆಡ್ಡಿಯವರ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ನೂರಕ್ಕೆ ತೊಂಭತ್ತು ಭಾಗ ಕನ್ನಡಿಗರಿಗೆ ನಿವೇಶನ ಇಲ್ಲ.

ಅಧ್ಯಕ್ಷರು: ನಾನು ಇದಕ್ಕೆ ಸಮಯವನ್ನು ಚರ್ಚೆಗೆ ಕೊಟ್ಟಿದ್ದೇನೆ, ಆ ದಿವಸ ನೀವು ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಈಗ ಮಾನ್ಯ ಬಸವರಾಜರಾಯರೆಡ್ಡಿಯವರೆ, ತಮ್ಮ ಪ್ರಶ್ನೆಯನ್ನು ಕೇಳಿ.

2000-2006ರ ವರೆಗೆ ರಾಜ್ಯದಲ್ಲಿ ಸಂಬಂಧಿಸಿದ ವಾಹನ ಅಪಘಾತ ಕುರಿತು.

144 (771) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೇ?

1. 2000 ಇಸವಿಯಿಂದ 2006 ರ ಮಾರ್ಚ್ ಮಾಹೆ ಯವರೆಗೆ ರಾಜ್ಯದಲ್ಲಿ ಸಂಭವಿಸಲಾದ ವಾಹನ ಅಪಘಾತಗಳು ಎಷ್ಟು. (ಜಿಲ್ಲಾವಾರು ಮಾಹಿತಿ ಒದಗಿಸುವುದು)

2. ಈ ಅಪಘಾತಗಳಲ್ಲಿ ಒಟ್ಟು ಎಷ್ಟು ಜನರಿಗೆ ಗಾಯಗಳಾಗಿವೆ ಹಾಗೂ ಎಷ್ಟು ಜನರು ಮೃತಪಟ್ಟಿರುತ್ತಾರೆ. (ಜಿಲ್ಲಾವಾರು ಮಾಹಿತಿ ಒದಗಿಸುವುದು)?

3. ಬೆಂಗಳೂರು ನಗರದಲ್ಲಿ 2000 ರಿಂದ 2006ರ ಮೇ ವರೆವಿಗೂ ಸಂಭವಿಸಿರುವ ವಾಹನ ಅಪಘಾತಗಳು ಎಷ್ಟು ಹಾಗೂ ಈ ವಾಹನ ಅಪಘಾತದಿಂದ ಮೃತಪಟ್ಟವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು?